DOC-254
T-P-2

R.No KKNN 12 6-3-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ
First Golden Jubilee Celebrated Paper in The State
** Now in 57 th Year **
'Satyavadi' daily, Mysore 4



ಕಾರ್ಯಕಾರಿ ಆಡಳಿತ ಮಂಡಳಿ ಅಧ್ಯಕ್ಷರು ಎಂ. ಸುಬ್ಬರಾವ್ ಸಂಪಾದಕರು ಮತ್ತು ಪ್ರಕಾಶಕರು ಎಂ. ಶ್ರೀಕೃಷ್ಣರಾವ್ 3 ಪೈ

ಆಹಾರ ಪದಾರ್ಥಗಳ ಬೆಲೆ ಇಳಿಸಲು ವಿ. ಸಂಘದ ಕರೆ

ಸತ್ಯ ಮತ್ತು ಅಹಿಂಸೆ

(ಮಹಾತ್ಮಾ ಗಾಂಧಿಯವರ ಸಂದೇಶ – ಶ್ರೀ ಯು ಎಸ್ ಮೋಹನರಾವ್)

ಅಹಿಂಸೆ ಮತ್ತು ಸತ್ಯ, ಒಂದೊಂದು ಹೆಣೆದುಕೊಂಡು ಬೆರೆತುಹೋಗಿದೆ; ಪ್ರತ್ಯೇಕಿಸುವುದು ವಾಸ್ತವಿಕವಾಗಿಯೂ ಅಸಾಧ್ಯವಾಗಿದೆ; ಸತ್ಯ ಮತ್ತು ಅಹಿಂಸೆ ಯಾವ ಮುದ್ರೆಯ ಅಚ್ಚೂ ಇಲ್ಲದ ಲೋಹದ ತಟ್ಟೆಯ ಅಥವಾ ನಾಣ್ಯದ ಎರಡು ಮುಖಗಳಂತಿವೆ; ಇದರಲ್ಲಿ ಯಾವುದು ಮೇಲ್ಮುಖ, ಯಾವುದು ಕೆಳಮುಖ ಎಂದು ಹೇಳಲು ಸಾಧ್ಯವಿಲ್ಲ; ಆದಾಗ್ಯೂ ಸತ್ಯವು ನಮ್ಮ ಗುರಿಯಾದರೆ ಈ ಗುರಿಯನ್ನು ತಲುಪಲು ಅಹಿಂಸೆಯು ಒಂದು ಸಾಧನವಾಗಿದೆ ನಮ್ಮ ಧ್ಯೇಯ ಸಾಧನೆಗಾಗಿ ನಾವು ಅನುಸರಿಸುವ ಮಾರ್ಗ ನಾವು ಕೈಗೊಳ್ಳುವ ಸಾಧನೆ, ಯಾವಾಗಲೂ ನಮ್ಮ ಶಕ್ತಿಮಿತಿಗೆ ಒಳಪಟ್ಟಿರಬೇಕು; ನಾವು ಅನುಸರಿಸುವ ಮಾರ್ಗ, ನಾವು ಕೈಗೊಳ್ಳುವ ಸಾಧನೆ ಶುದ್ಧವಾಗಿದ್ದಲ್ಲಿ, ಇಂದಲ್ಲ. ನಾಳೆ ನಾವು ನಮ್ಮ ಗುರಿಯನ್ನು ತಲುಪೇ ತಲುಪುತ್ತೇವೆ; ನಾವು ಈ ಅಂಶವನ್ನು ಗಮನಿಸಿಕೊಂಡಲ್ಲಿ ನಮಗೆ ಜಯ ದೊರೆಯಲೆಬೇಕು ನಮ್ಮ ಧ್ಯೇಯ ಸಾಧನೆಗಾಗಿ, ನಮ್ಮ ಗುರಿಯನ್ನು ತಲುಪುವುದಕ್ಕಾಗಿ ನಾವು ಮುನ್ನಡಿಯಿಟ್ಟಾಗ, ಅನೇಕ ಕ್ಲಿಷ್ಟ ಪರಿಸ್ಥಿತಿಗಳನ್ನೂ ಪರಾಭವನವನ್ನೂ ಎದುರಿಸಬೇಕಾಗಬಹುದು. ಆಗಲೂ ಸಹಾ ನಾವು ನಮ್ಮ ಪಟ್ಟು ಬಿಡದೆ ಮುನ್ನಡೆಯುವದು ಅಗತ್ಯವಾಗಿದೆ ಸತ್ಯಕ್ಕಾಗಿ ನಾವು ನಡೆಸುವ ಈ ಪ್ರಯತ್ನ, ದೇವರನ್ನು ಕಾಣುವ ಪ್ರಯತ್ನವಾಗಿದೆ.

●

ತಾಜ್‌ಮಹಲ್ಲನ್ನೂ ಮೀರುವಂತಿದೆ

ಹೈದರಾಬಾದು— ನಗರದ ಮಧ್ಯದಲ್ಲಿ ಕಲಾಕಾರಂಜಿಯ ದಿಂಡಿನ ಮೇಲೆ ಕಟ್ಟಲಾಗುತ್ತಿರುವ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನವು ಬಹು ಭವ್ಯ ಧಾರ್ಮಿಕ ಕೇಂದ್ರವಾಗುವುದಾಗಿದೆ – ರೂ. 30 ಲಕ್ಷ ಖರ್ಚಿನದು ಇದು – ಅಮೃತಶಿಲೆಯ ಈ ಕಟ್ಟಡವು ತಾಜ್‌ಮಹಲ್‌ಗಿಂತಲೂ ಹೆಚ್ಚು ಆಕರ್ಷಣೀಯವಾಗಿದ್ದು, ತಾಜ್‌ಮಹಲ್ಲು ದ್ವಿತೀಯ ಸ್ಥಾನಕ್ಕೆ ಇಳಿಯುವಂತಾದೀತೆನ್ನಲಾಗಿದೆ. ವೀಕ್ಷಿಸಿದವರಲ್ಲಿ ನೋಟಕರಿಗೆ ಅತ್ಯಾಕರ್ಷಣೀಯವೂ ಆನಂದದಾಯಕವೂ ಆಗಿರುತ್ತದೆ.

★

6 ಮಿಲಿಯ ಟನ್ ಧಾನ್ಯ ವಿತರಣೆ

ನವದೆಹಲಿ— ಸಾರ್ವಜನಿಕ ಹಂಚಿಕೆ ಪದ್ಧತಿ ವರ್ಷ 74–75 ರಲ್ಲಿ ಸರಕಾರ 10 ಮಿಲಿಯ ಟನ್ನು ಆಹಾರಧಾನ್ಯಗಳನ್ನು ವಿತರಣೆ ಮಾಡುವರೆಂದು ಪಾರ್ಲಿಮೆಂಟು ಸದಸ್ಯರಿಗೆ ಹಂಚಿದ ವಿವರಪತ್ರದಲ್ಲಿ ತಿಳಿಸಲಾಗಿದೆ; ಈ ಪೈಕಿ 8 ಮಿಲಿಯ ಟನ್ ಗೋಧಿ 1.1 ಲಕ್ಷ ಟನ್ ಅಕ್ಕಿ, ಮಿಕ್ಕಿದ್ದು ಒರಟುಧಾನ್ಯಗಳಾಗಿವೆ.

●

ಮದ್ಯಕ್ಕೆ ತೆರಿಗೆ ಹೆಚ್ಚಿಸಲಾಗಿದೆ

ಮದರಾಸು – ತಮಿಳುನಾಡುವಿನ ಬಡ್ಜೆಟ್‌ನಲ್ಲಿ ಭಾರತ ಮತ್ತು ವಿದೇಶೀ ಮದ್ಯಕ್ಕೆ ತೆರಿಗೆ ಹೆಚ್ಚಿಸಲಾಗಿದೆ.

ಅರ್ಥಶಾಸ್ತ್ರಜ್ಞರ ಅಭಿಪ್ರಾಯ

ಶಿವಮೊಗ್ಗ— ಬೆಲೆ ಮಟ್ಟವನ್ನು ಹತೋಟಿಯಲ್ಲಿಡದಿದ್ದರೆ, ಗೂಜರಾತಿನ ರೀತಿ ಪರಿಸ್ಥಿತಿಯು ದೇಶದಲ್ಲೆಲ್ಲಾ ಹರಡಬಹುದೆಂದು ರಿಸರ್ವ್ ಬ್ಯಾಂಕಿನ ಮಾಜಿ ಗೌರ್ನರ್ ಮತ್ತು ಪ್ರಮುಖ ಅರ್ಥಶಾಸ್ತ್ರಜ್ಞರೂ ಆದ ಶ್ರೀ ಹೆಚ್. ವಿ. ಆರ್. ಅಯ್ಯಂಗಾರ್ಯರು ಹೇಳಿರುವರು.

★

ಸಂಬಳದ ಬಿಲ್ಲುಗಳು ಸಲ್ಲಿಸಲಾಗಿಲ್ಲ

ಕರ್ನೂಲು— ಜನರು ಕಂದಾಯ ಸಾವತಿ ಮಾಡದಿರುವುದರಿಂದ, 19 ಮುನಿಸಿಪಾಲಿಟಿಗಳಲ್ಲಿ ಸಂಬಳದ ಬಿಲ್ಲುಗಳನ್ನು ಸಲ್ಲಿಸಲಾಗಿಲ್ಲವೆಂದು ಪೌರಾಡಳಿತ ಮಂತ್ರಿ ಶ್ರೀ ಚಿಲ್ಲ ಸುಬ್ಬರಾಯಡು ಒಂದು ಸಭೆಯಲ್ಲಿ ಹೇಳಿದರು.

ವಿಚಾರಣೆ ಕಾರ್ಯ

ಬೆಂಗಳೂರು— ಶನಿವಾರ ರಾತ್ರಿ ಮೈಸೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿದ ಕ್ರೂರ ಕಾರ್ಯ ಬಗ್ಗೆ ವಿಚಾರಿಸಲು ಗೃಹ ಇಲಾಖೆಗೆ ಸೇರದ ಒಬ್ಬ ಅಧಿಕಾರಿಯನ್ನು ಕಳುಹಿಸಲಾಗುವುದೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

ಚಿನ್ನದ ಸರ ಅಪಹರಣೆ

ಹೈದರಾಬಾದು— ಅಪರಿಚರು ನಾಲ್ಕು ಮಂದಿ ಒಬ್ಬ ಮಹಿಳೆಯ ಕತ್ತಿನಲ್ಲಿದ್ದ 25 ತೊಲಾ ಚಿನ್ನದ ಸರವನ್ನು ಅಪಹರಿಸಿದಾಗ, ಅವಳು ಕೂಗಿಕೊಳ್ಳಲು ಪ್ರಯತ್ನಿಸಿದಾಗ ಅವನ್ನು ಹೊಡೆದುದಲ್ಲದೆ, ಅವಳ ಸಹಾಯಕ್ಕೆ ಬಂದ ಅವಳ ಗಂಡ ಮತ್ತು ಮಗನನ್ನೂ ಹೊಡೆದು, ಸರದೊಡನೆ ಪರಾರಿಯಾದರು.

● ಜಮ್ಮು—ಕಾಶ್ಮೀರ ವಿಧಾನ ಪರಿಷತ್ತಿಗೆ ಎಲ್ಲಾ ೮ ಕಾಂಗ್ರೆಸ್ ಉಮೇದುವಾರರು ಅವಿರೋಧವಾಗಿ ಆಯ್ಕೆಯಾದರು.

ಅರಿಯಲ್ಪದ ಕಾರ್ಯ

ನವದೆಹಲಿ — ತಾ॥ 1 ರಂದು ಮಧ್ಯರಾತ್ರಿಯಲ್ಲಿ ಪೆಟ್ರೋಲು ಪದಾರ್ಥಗಳ ಬೆಲೆ ಹೆಚ್ಚಿಸಿದುದು ಪಾರ್ಲಿಮೆಂಟನ್ನು ನಿರ್ಲಕ್ಷಿಸಲಾಗಿದೆ ಎಂದೂ ಹಕುಬಾಧ್ಯತಾ ಉಲ್ಲಂಘನೆಯೆಂದೂ ಪದಸ್ಥರು ಟೀಕಿಸಿದುದಲ್ಲದೆ, ಸ್ಪೀಕರ್ ಶ್ರೀ ಡಿಲಾನರೂ, ಸರಕಾರದ ಈ ಕಾರ್ಯವು ಸರಿಯಾದುದಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

★

ಸರಕಾರಕ್ಕೆ ಎಚ್ಚರಿಕೆ

ಬೆಂಗಳೂರು— ಎಲ್ಲ ಅವಶ್ಯ ಪದಾರ್ಥಗಳ ಏರಿಕೆ ಬೆಲೆ ಹತೋಟಿಗೆ ತರದಿದ್ದರೆ ಗೂಜರಾತಿನ ಮಾರ್ಗ ಬಿಟ್ಟು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಬೇರೆ ಆಯ್ಕೆ ಇಲ್ಲವೆಂದು ಭಾರತ ವಿದ್ಯಾರ್ಥಿ ಸಂಘದ ಜಿಲ್ಲಾ ಸಮ್ಮೇಳನ ಸರಕಾರಕ್ಕೆ ಎಚ್ಚರಿಸಿದೆ.

★

ಚಲಚ್ಚಿತ್ರ ರಾಷ್ಟ್ರೀಕರಣ

ಬೆಂಗಳೂರು— ಚಲನಚಿತ್ರ ಹಂಚಿಕೆ ರಾಷ್ಟ್ರೀಕರಣ ಮಾಡಬೇಕೆಂದು ಶಾಸನ ಸಭೆಯಲ್ಲಿ ಶ್ರೀ ದಯಾನಂದ ಸಾಗರ್ ರವರು ಹೇಳಿದರು

ಸತ್ಯನಾಶ

ನಾನು ಸತ್ಯವನ್ನು ನುಡಿದಿದ್ದರಿಂದ ಚುನಾವಣೆಯಲ್ಲಿ ಸೋಲುವಂತಾಯಿತು – ಬಾಲ್ಡ್‌ವಿನ್

ಆಕಾಶವಾಣಿ ಹಣ ತೆರಿಗೆದಾರರಿಗೆ ಪಾದಯಾತ್ರೆ

ರಾಷ್ಟ್ರೀಯ ಚಿತ್ರ ಆಕಾಶವಾಣಿಯಲ್ಲಿ ಅಧಿಕ ಹಣ ಸಂಗ್ರಹಿಸಲು ಇದೇ ತಿಂಗಳ ೭ ದಿನಾಂಕ 7, 10, ಹಾಗೂ 18 ರಂದು ಅಪೇಕ್ಷಪಾವಾಗಿ, ಬಿಜಾಪುರ, ಹುಬ್ಬಳ್ಳಿ ಮತ್ತು ಹಾಗಲಕೋಟೆಗಳಲ್ಲಿ ಪಾದಯಾತ್ರೆ ಏರ್ಪಡಿಸಲಾಗಿದೆ.

o

ಅಂತರ ರಾಜ್ಯ ರಸ್ತೆ ಸರಕು ಸಾಗಾಣಿಕೆ ಸಮೀಕ್ಷೆ

ಬೆಂಗಳೂರು– ಅಂತರ ರಾಜ್ಯ ರಸ್ತೆ ಸರಕು ಸಾಗಾಟದ ಪ್ರಮಾಣ, ಮೌಲ್ಯ ಇತ್ಯಾದಿ ವಿಷಯಗಳನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳಲು ಇದೇ ತಿಂಗಳ 4 ರಿಂದ 11 ರವರೆಗೆ ರಾಜ್ಯದ ಬೆಂಗಳೂರು–ಶ್ರೀರಂಗಪಟ್ಟಣ–ಸೇಲಂ, ಕರ್ನಾಟಕದಾದ್ಯಂತ ರಸ್ತೆ ಮೂಲಕ ರಾಷ್ಟ್ರೀಯ ಹೆದ್ದಾರಿ 7) ಹಾದುಹೋಗುವ ಆಯ್ದ ಬೆಲೆ ಹತ್ತಿರ ಪ್ರಾಯೋಗಿಕವಾಗಿ ಸಮೀಕ್ಷೆ ನಡೆಸಲಾಗುವುದು.

ಜಪಾನಿನಿಂದ ಮದರಾಸಿಗೆ ಹಾವಿನ ಸಾಗಾಟ

ಮದರಾಸಿನಲ್ಲಿ ರೋಮಕ್ ವಿಟೇಕರರ ಮೇಲ್ವಿಚಾರಣೆಯಲ್ಲಿರುವ ಪ್ರಸಿದ್ಧವಾದ ಹಾವಿನ ತೋಟಕ್ಕೆ ಜಪಾನಿನಿಂದ ಅಲ್ಲಿಯ ಸರಕಾರವು ಉಚಿತವಾಗಿ ವಿಮಾನ ಮೂಲಕ ಕಳಿಸಿದೆ.

*

Quality Printing Neat Binding

Lakshminarasimha Press

Sivarampet, Mysore 1

Contribute Liberally

to the National Defence Fund

S H A K T I

S U D H A

A Superb Tonic

Help The Gorakshana

— HumanitarianPropoganda Monthly ....

ವುಡ್‌ಲಾಂಡ್ 1 3 74 ರಿಂದ

ಅವೋಘ ಆರಂಭ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಪ್ರಾಣ್, ನವೀನ್ ನಿಶ್ಚಲ್, ರೇಖಾ

ದಿನ 4 ಪ್ರದರ್ಶನಗಳು – 10-30, 3, 6-30, 9-45

11-15 ರಿಂದ 12 ರ ವರೆಗೆ ಬಾಲ್ಕನಿ ಕರಗತಿಗಳಿಗೆ ಮುಂಗಡ ಟಿಕೆಟ್ ಇಷ್ಟೆ

*

ಅಪೆರಾ 20 2 74 ರಿಂದ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ರತ್ನ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಸತ್ಯನಾರಾಯಣ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore